ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಮ್ಮ ತಾಲ್ಲೂಕ್ ಒಂದರಲ್ಲೇ ೩೧೨ ಕೊಳವೆಬಾವಿಗಳು ನೀರಿಲ್ಲದೆ ಪೂರ್ತಿ ಹೋಗಿವೆ. ಎಲ್ಲಿ ನೀರು ಸಿಗುತ್ತದೆ ಎಂಬುದನ್ನು ವಿಜ್ಞಾನಿಗಳ ಹತ್ತಿರ ಸಂಬಂಧ ಪಟ್ಟವರ ಹತ್ತಿರ ಕೇಳುತ್ತೇನೆ. ತಾವು ಅದಕ್ಕೆ ಅನುದಾನ ಬಿಡುಗಡೆ ಮಾಡುವ ಭರವಸೆ ಕೊಡಬೇಕು. ಹೊಸ ಕೊಳವೆ ಬಾವಿಗಳನ್ನು ಹಾಕುವುದಕ್ಕೆ ೩೦೦ ಕೊಳವೆ ಬಾವಿಗಳಿಗೆ ನಾನು ಸ್ಥಳಗಳನ್ನು ಕೊಡುತ್ತೇನೆ. ದಯವಿಟ್ಟು ತಾವು ಸದನದಲ್ಲಿ ಚಾಮರಾಜನಗರ ತಾಲ್ಲೂಕಿಗೆ ಹಣ ಕೊಡುವ ಭರವಸೆ ಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಹೋದ ವರ್ಷ ೧೦೮ ಕೋಟಿ ಇದ್ದರೆ ಈ ವರ್ಷ ೧೨೫ ಕೋಟಿ ಇದೆ. ಹಣದ ಪ್ರಶ್ನೆ ಇಲ್ಲ. ನೀರು ಸಿಗುವ ಪ್ರಶ್ನೆ ಇದು.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಭರವಸೆ ಪ್ರಕಾರ ನಾನು ಪತ್ರ ಬರೆಯುತ್ತೇನೆ. ಸ್ಥಳ ತೋರಿಸುತ್ತೇನೆ. ದಯವಿಟ್ಟು ತಾವು ಮಾಡಿಸಿಕೊಡಬೇಕು.

ಚಿಕ್ಕನಾಯಕನ ಹಳ್ಳಿಯಲ್ಲಿ ಡಿ. ಪಿ. ಎ. ಪಿ. ಯೋಜನೆ

೧೯೯ (೬೯೨) ಶ್ರೀ ಟಿ ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಚಿಕ್ಕನಾಯಕನಹಳ್ಳಿ ಮತ್ತು ತಿರಾ ತಾಲ್ಲೂಕುಗಳಲ್ಲಿ ಡಿಪಿಎಪಿ ಯೋಜನೆಯನ್ವಯ ೧೯೮೦ರ ಸಾಲಿನಲ್ಲಿಯೇ ಅಂಬಾರಪುರ ಮತ್ತು ಮಾರನದು ಏತ ನೀರಾವರಿ ಹಾಗೂ ಸಲುಪರಹಳ್ಳಿ ಮತ್ತು ಮಂಗನಹಳ್ಳಿಯಲ್ಲಿ ಕೆರೆಗಳನ್ನು ನಿರ್ಮಾಣ ಮಾಡಲು ಕಾರ್ಯಕ್ರಮ ತೆಗೆದುಕೊಂಡಿದ್ದು ನಿಜವೇ ?

ಆ) ಆ ಕೆಲಸಗಳು ಅರೆಬರೆಯಲ್ಲಿ ಸ್ಥಗಿತವಾಗಿದ್ದು, ಅನೇಕ ಬಾರಿ ಜಿಲ್ಲಾ ವರಿಷ್ಟರ ಗಮನಕ್ಕೆ ತಂದಿದ್ದರೂ ಸಹ ಇದುವರೆಗೂ ಕೆಲಸವನ್ನು ಪ್ರಾರಂಭಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಸಾಲಿನಲ್ಲಾದರೂ ಕೆಲಸವನ್ನು ಸಂಪೂರ್ಣಗೊಳಿಸಲಾಗುವುದೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ೧೯೮೦ನೇ ಸಾಲಿನಲ್ಲಿ ಬರಗಾಲ ಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ ಅಂಬಾರಪುರ ಮತ್ತು ಮಾರನದು ಗ್ರಾಮಗಳನ್ನು ಏತ ನೀರಾವರಿ ಕಾಮಗಾರಿಗಳನ್ನು ಹಾಗೂ ಸಲುಪರಹಳ್ಳಿ ಗ್ರಾಮದಲ್ಲಿ ಕೆರೆ ಕಾಮಗಾರಿಯನ್ನು ತೆಗೆದುಕೊಂಡಿದ್ದು ನಿಜ' ಆದಾಗ್ಯೂ ಮಂಗನಹಳ್ಳಿ ಗ್ರಾಮದ ಕೆರೆ ಕೆಲಸದ ಕಾಮಗಾರಿಯನ್ನು ಆ ವರ್ಷದಲ್ಲಾಗಲೀ ಅಥವಾ ಮುಂದಿನ ವರ್ಷದಲ್ಲಾಗಲೀ ತೆಗೆದುಕೊಂಡಿರುವುದಿಲ್ಲ.

ಆ) ಮೊದಲನೆಯ ೩ ಕಾಮಗಾರಿಗಳು ಅಂದರೆ, ಅಂಬಾರಪುರ ಮತ್ತು ಮಾರನದು ಏತ ನೀರಾವರಿ ಹಾಗೂ ಸಲುಪರಹಳ್ಳಿ ಕೆರೆ ಕೆಲಸ ಅರ್ಧಕ್ಕೆ ಸ್ಥಗಿತವಾಗಿದ್ದು ನಿಜ.

ಇ) ಎರಡು ಏತ ನೀರಾವರಿ ಯೋಜನೆಗಳ ಕಾಮಗಾರಿಗಳು ೧೯೯೪-೯೫ನೇ ಸಾಲಿನಲ್ಲಿ ಪೂರ್ಣಗೊಳ್ಳುವುವು. ಸಲುಪರಹಳ್ಳಿ ಕೆರೆಯ ನಿರ್ಮಾಣವು ತಾಂತ್ರಿಕವಾಗಿ ಸಾಧುವಲ್ಲವೆಂದು ಕಂಡುಬಂದಿರುವುದರಿಂದ ತೆಗೆದುಕೊಂಡಿರುವುದಿಲ್ಲ. ಮಂಗನಹಳ್ಳಿ ಕೆರೆ ನಿರ್ಮಾಣದ ಯೋಚಿತ ಕಾಮಗಾರಿಯ ಪ್ರದೇಶವು ಅಬ್ಕಾರಿ ಇಲಾಖೆಗೆ ಸೇರಿದ್ದಾಗಿರುತ್ತದೆ. ಹಾಗೂ ಅಬ್ಕಾರಿ ಇಲಾಖೆಯ ಸದರಿ ಪ್ರದೇಶವನ್ನು ಜಿಲ್ಲಾ ಪಂಚಾಯತ್ ವಶಕ್ಕೆ ವಹಿಸಿದಲ್ಲಿ, ಈ ಕೆರೆ ನಿರ್ಮಾಣದ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಟಿ. ಬಿ. ಜಯಚಂದ್ರ.—ಸಭಾಧ್ಯಕ್ಷರೇ, ನನ್ನ ಮೂಲ ಪ್ರಶ್ನೆಗೆ ಉತ್ತರವಾಗಿ ಅಂಬಾರಪುರ ಸಲುಪರಹಳ್ಳಿ ಮತ್ತು ಮಂಗನಹಳ್ಳಿ ಕೆರೆಗಳ ಕೆಲಸ ಅರ್ಧಕ್ಕೆ ಸ್ಥಗಿತವಾಗಿರುವುದು ನಿಜ ಎಂಬ ಮಾತನ್ನು ಹೇಳಿದ್ದಾರೆ. ಅದು ಪ್ರಾರಂಭವಾಗಿದ್ದು ೧೯೮೦ರಲ್ಲಿ. ಇವತ್ತಿನವರೆಗೂ ಕೆಲಸ ಆಗಿಲ್ಲ.

ಅರ್ದಂಬರ್ದವಾಗಿದೆ. ಜಿಲ್ಲಾ ಪರಿಷತ್ತಿನ ಸಭೆಗಳಲ್ಲಿ ಚೀಫ್ ಸೆಕ್ರೆಟರಿ ಹತ್ತಿರ ಒಂದು ಸಾರಿ ಅಲ್ಲ ನೂರಾರು ಬಾರಿ ನಾವು ಚರ್ಚೆ ಮಾಡಿದ್ದೇವೆ ಮತ್ತು ಸರ್ಕಾರಕ್ಕೂ ಕಾಗದಗಳನ್ನು ಬರೆದಿದ್ದೇನೆ. ಆದರೂ ಕೂಡ ಕೆಲಸ ಆಗಿಲ್ಲ. ನಾನು ಏತಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ ಎಂದರೆ ಕೇವಲ ಡಿ. ಪಿ ಎ. ಪಿ. ಯಲ್ಲಿ ಬರತಕ್ಕ ಕೆಲಸಗಳು ಮಾತ್ರವಲ್ಲ ಯಾವ ಕೆಲಸಗಳನ್ನೂ ಸಂಪೂರ್ಣವಾಗಿ ಮುಗಿಸುವುದಕ್ಕಾಗಿಲ್ಲ. ಕಾರಣ ಏನೆಂದರೆ ಜಿಲ್ಲಾ ಪರಿಷತ್ತಿನವರು ಒಂದು ತೀರ್ಮಾನ ಮಾಡುತ್ತಾರೆ. ಡಿ. ಪಿ. ಎ. ಪಿ. ಗೆ ಸಪರೇಟಾಗಿ ಸರ್ಕಾರದಿಂದ ಗ್ರಾಂಟ್ಸ್ ಬರುತ್ತದೆ, ಆಗ ಮಾಡೋಣ ಎಂದು ಫೂಲೆಗುಂಲ್ಲ ಮಾಡಿ ಆ ಕಾರಣದಿಂದ ಒಂದು ಕೆಲಸ ಕೂಡ ಮುಗಿಸುವುದಕ್ಕೆ ಆಗಿಲ್ಲ. ತಾವು ಯೋಚನೆ ಮಾಡಿ ಅದು ೧೯೬೦ರಲ್ಲಿ ಪ್ರಾರಂಭವಾಗಿರತಕ್ಕದ್ದು. ಈಗಾಗಲೇ ಅದಕ್ಕೆ ಇನ್ವೆಸ್ಟ್ ಮಾಡಿರುವ ಹಣ ಸುಮಾರು ೧೦-೧೫-೨೦ ಲಕ್ಷ ರೂಪಾಯಿಗಳು. ಅಷ್ಟು ಖರ್ಚು ಮಾಡಿ ಕೇವಲ ಹಾಲ್ಕೈದು ಲಕ್ಷ ರೂಪಾಯಿನ ಕೆಲಸ ಮುಗಿಸುವುದಕ್ಕಾಗಲಿಲ್ಲ ಎಂದರೆ ಇವತ್ತು ಯಾವರೀತಿಯಾಗಿ ಅಸೆಟ್ಸ್ ಕ್ರಿಯೇಟ್ ಮಾಡುವ ಮಟ್ಟದಲ್ಲಿ ಜಿಲ್ಲಾ ಪರಿಷತ್ತು ಕೆಲಸ ಮಾಡುತ್ತಿದೆ ಎಂಬುದನ್ನು ಯೋಚನೆ ಮಾಡಿ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಡಿ. ಪಿ. ಎ. ಸಿ. ಕೆಲಸವನ್ನು ಸಂಪೂರ್ಣವಾಗಿ ಮುಗಿಸಿ. ನೀವು ಜಿಲ್ಲಾ ಪರಿಷತ್ ಅನುದಾನದಲ್ಲಾದರೂ ಮಾಡಿ ಸಪರೇಟಾಗಿಯಾದರೂ ಮಾಡಿ ಮುಗಿಸುತ್ತೇವೆ ಎಂಬ ಆಶ್ವಾಸನೆಯನ್ನು ದಯವಿಟ್ಟು ಕೊಡಬೇಕು. ಇನ್ನೊಂದು ತಾವು ಹೇಳಿದ್ದೀರಿ, ಎರಡು ವೀರಾವರಿ ಯೋಜನೆಗಳನ್ನು ೧೯೬೪-೬೫ರಲ್ಲಿ ಸಂಪೂರ್ಣವಾಗಿ ಮುಗಿಸುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಸಂತೋಷ. ಆದರೆ ಬೇರೆ ಇದೆಯಲ್ಲಾ ಸಲುಪರಹಳ್ಳಿ ಮತ್ತು ಮಂಗನಹಳ್ಳಿ ಈ ಎರಡು ಕೆರೆಗಳನ್ನು ಕೂಡ ಮುಗಿಸಬೇಕು. ದಯವಿಟ್ಟು ತಾವು ತಿಳಿದುಕೊಳ್ಳಬೇಕು ಈ ಕೆರೆಗಳನ್ನು ೧೯೬೦ರಲ್ಲಿ ತಮ್ಮ ಜಿಲ್ಲೆಯವರೇ ಆಗಿರತಕ್ಕ ಶ್ರೀ ಸದ್ಯೋಜಾತಪ್ಪನವರು ಬಂದು ಶಂಕುಸ್ಥಾಪನೆ ಮಾಡಿ ಕೆಲಸವನ್ನು ಪ್ರಾರಂಭ ಮಾಡಿರುವುದು. ಶಂಕುಸ್ಥಾಪನೆ ಮಾಡಿದ ಸಂದರ್ಭದಲ್ಲಿ ಪೂರ್ವಭಾವಿಯಾಗಿ ಏಲ್ಲವನ್ನೂ ಕೂಡ ಯೋಚನೆ ಮಾಡಿ ಕೆರೆಗಳನ್ನು ಮಂಜೂರು ಮಾಡಿದ್ದಾರೆ. ಇವತ್ತು ಕೊಡುತ್ತಿರುವ ಉತ್ತರ ಏನಿದೆ ಇದು ನನಗೆ ಗೊತ್ತಿತ್ತು. ಇಂಥ ಉತ್ತರ ಬರುತ್ತದೆ ಎಂದು ನನಗೆ ಗೊತ್ತಿತ್ತು. ಸಲುಪರಹಳ್ಳಿ ಕೆರೆ ಹಿಂಭಾಗದಲ್ಲಿ ಸಂಪೂರ್ಣವಾಗಿ ಎಸ್. ಟಿ. ಜನಾಂಗದವರಿದ್ದಾರೆ. ಅವರಿಗೆ ಈ ಕೆರೆಗಳಿಂದ ಅನುಕೂಲವಾಗುವುದು. ಮೇಲುಗಡೆ ವರ್ಗದವರು ಆ ಜನಾಂಗದವರಿಗೆ ಕೆರೆಗಳಾಗಬಾರದು ಎಂಬ ಉದ್ದೇಶದಿಂದ ಇದನ್ನು ತಡೆಹಿಡಿದಿದ್ದಾರೆ. ಇಲ್ಲಿಯವರೆಗೂ ೧೫ ವರ್ಷಗಳಿಂದ ಕಷ್ಟಪಟ್ಟರೂ ಅವರ ವಿರುದ್ಧ ಮಾಡುವುದಕ್ಕೆ ಆಗಲಿಲ್ಲ. ಮಂಗನಹಳ್ಳಿ ಕೆರೆ ಆದು ಶೇಂದಿ ವನಕ್ಕೆ ಸೇರುತ್ತದೆ ಎನ್ನತಕ್ಕ ಉತ್ತರ ಕೊಡುತ್ತಾರೆ. ಈ ಇಲಾಖೆಗೆ ಜವಾಬ್ದಾರಿ ಇದೆಯೋ ಎಂದು ನನಗನಿಸುತ್ತದೆ. ಶೇಂದಿ ಇಲಾಖೆಗೆ ಸೇರಿದ್ದರೆ ಅಲ್ಲಿ ಮರಗಳು ಇಲ್ಲದಿದ್ದರೆ ಅಂತಹ ಸಂದರ್ಭದಲ್ಲಿ ಕೆರೆ ಕಟ್ಟುವುದಕ್ಕೆ ಏನು? ಈಗಾಗಲೇ ಅಲ್ಲಿ ಭೂಮಿ ಸಾಗಿನಲ್ಲಿದೆ. ಸುಮಾರು ಹತ್ತಾರು ವರ್ಷಗಳಿಂದ ಸಾಗು ನಡೆಯುತ್ತಿದೆ, ಆ ಜಮೀನುಗಳಿಗೆ ಕೆರೆ ಕಟ್ಟಿಸುವುದಕ್ಕೆ ಆದು ನೀತಿಯ ಪ್ರಶ್ನೆಯಾಗುತ್ತದೆ. ಬಡವರು ಹಿಂದುಳಿದವರು ಮತ್ತು ಹರಿಜನ ಗಿರಿಜನರು ಇದ್ದಾರೆ ಆ ಕಡೆಗೆ ಕೆಲಸವನ್ನು ಮಾಡಬಾರದೆನ್ನುವ ತೀರ್ಮಾನವನ್ನು ಜಿಲ್ಲಾಪರಿಷತ್‌ನವರು ತೆಗೆದುಕೊಂಡಿದ್ದಾರೆ ಎ ತಕ್ಕದ್ದನ್ನು ಹೇಳಬೇಕಾಗಿದೆ. ಡಿಪಿಎಪಿನಲ್ಲಿ ಹಣವನ್ನು ಯಾವರೀತಿ ಕೊಡುತ್ತೀರಿ? ಇಲ್ಲಿ ಯಾವ ರಿತಿ ಮಾಡಿಕೊಡುತ್ತೀರಿ ಎನ್ನುವುದನ್ನು ದಯವಿಟ್ಟು ನನ್ನ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ನಾಲ್ಕು ವರ್ಕ್ಸ್‌ಗಳ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಮೊದಲನೆಯ ಎರಡು ವರ್ಕ್ಸ್ ಲಿಫ್ಟ್ ಇರಿಗೇಷನ್ ಕಾಮಗಾರಿಗಳು. ಲಿಫ್ಟ್ ಇರಿಗೇಷನ್ ಕಾಮಗಾರಿಗಳು ತಡವಾಗಿರುವುದು ನಿಜ. ಅದಕ್ಕೆ ಮುಖ್ಯವಾದ ಕಾರಣ ಏನೆಂದರೆ ಮೈನರ್ ಇರಿಗೇಷನ್ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು ಮಾಡುತ್ತಿದ್ದರು ಅದು ೫ ಲಕ್ಷದ ೨೨ ಸಾವಿರ ರೂಪಾಯಿನದ್ದು ಒಂದು. ಇನ್ನೊಂದು ೩ ಲಕ್ಷದ ೩೩ ಸಾವಿರ. ಈ ಕೆಲಸಗಳಿಗೆ ಈಗಾಗಲೇ ೬ ಲಕ್ಷದ ೨೯ ಸಾವಿರ ಮತ್ತು ೪ ಲಕ್ಷದ ೮೦ ಸಾವಿರ ಖರ್ಚಾಗಿದೆ. ಇಷ್ಟು ಹಣ ಖರ್ಚಾದರೂ ಕೂಡ ಆ ವರ್ಕ್ಸ್‌ಗಳು ಕಂಪ್ಲೀಟ್ ಆಗಿಲ್ಲ. ಕೆಲಸ ಕಂಪ್ಲೀಟ್ ಆಗಿಲ್ಲವೆಂದು ಹೇಳಿ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಜಿಲ್ಲಾಪರಿಷತ್‌ನವರಿಗೆ ಕಂಪ್ಲೀಟ್ ಮಾಡಬೇಕೆಂದು ಈಗ ಹೇಳಿದ್ದಾರೆ. ಆದಕಾರಣ ಜಿಲ್ಲಾ ಪರಿಷತ್‌ನವರು ಖಂಡಿತವಾಗಿಯೂ ಈ ವರ್ಷದಲ್ಲಿ ಆ ಕೆಲಸವನ್ನು ಪೂರೈಸುವುದರಲ್ಲಿ ತೊಂದರೆಯಿಲ್ಲ. ಆದಕ್ಕೋಸ್ಕರ ಅಷ್ಟು ಆತ್ಮ ವಿಶ್ವಾಸದಿಂದ ನಾನು ಹೇಳುತ್ತಿದ್ದೇನೆ. ಈ ಎರಡೂ ಕೆಲಸಗಳನ್ನು ಕಂಪ್ಲೀಟ್ ಮಾಡುತ್ತೇವೆ. ಏಕೆಂದರೆ ಈಗ ಜಿಲ್ಲಾ ಪರಿಷತ್‌ನವರು ಮಾಡುತ್ತಿದ್ದಾರೆ. ಇನ್ನೊಂದು ಪ್ರಶ್ನೆ ಏನೆಂದರೆ ಇದು ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿನವರದಲ್ಲ. ಇನ್ನೊಂದು

ಕೆಲಸ ಸಲುಪರಹಳ್ಳಿ ಅದರಲ್ಲಿ ೮ ಸಾವಿರ ಮಾತ್ರ ಖರ್ಚು ಮಾಡಿದ್ದಾರೆ. ೮ ಸಾವಿರ ಖರ್ಚು ಮಾಡಿದಾಗ ಆ ಕಾಲಕ್ಕೆ ಕೆಳಗಿರತಕ್ಕ ಜನಗಳಿಗೆ ತೊಂದರೆಯಾಗುತ್ತದೆನ್ನುವ ದೂರುಗಳು ಬಂದವು. ಆಗ ಆಗಿದ್ದು ನಾನು ಹೇಳುತ್ತಿದ್ದೇನೆ. ೧೦ ವರ್ಷಗಳ ಹಿಂದೆ ಆಗಿರತಕ್ಕದ್ದು ಆ ಮಾತು. ಈ ಸರ್ಕಾರದ ಮಾತಲ್ಲ. ಅನಂತರ ಟೆಕ್ನಿಕಲ್ ಫೀಸಬಲಿಟಿ ವಯಬಲ್ ಆಗಿಲ್ಲವೆಂದು ಬರೆಸಿದ್ದಾರೆ. ಯಾವಾಗ ಬರೆಸಿದ್ದಾರೆಂದರೆ ದಿನಾಂಕ ೧೯ನೇ ಜೂನ್ ೧೯೮೫ ರಲ್ಲಿ ಬರೆಸಿದ್ದಾರೆ. ತಾವು ಆ ವರದಿ ಸರಿಯಿಲ್ಲವೆಂದು ಹೇಳುವುದಾದರೆ ಅದು ವಯಬಲ್ ಆಗುತ್ತದೆಂದರೆ ಕೆಳಗೆ ಇರತಕ್ಕ ಜನಗಳಿಗೆ ತೊಂದರೆಯಾಗುವುದಿಲ್ಲ ಅಥವಾ ಯಾರಿಗೆ ಅನುಕೂಲವಾಗಬೇಕೋ ಆ ರೀತಿ ಅನುಕೂಲ ಮಾಡುವುದಕ್ಕೆ ಸಾಧ್ಯವಿದೆ ಇದನ್ನು ಕೈಬಿಡಬಾರದೆಂದು ಹೇಳುವುದಾದರೆ Sir, I will have this matter re-examined. ಅದರ ಇತಿಹಾಸವನ್ನು ನಿಮಗೆ ಹೇಳಿದೆ. ಅದರ ಬಗ್ಗೆ ಪುನಃ ರೀ ಎಕ್ಸಾಮಿನ್ ಮಾಡಿ ವಯಬಲ್ ಆಗಿ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡುತ್ತೇನೆ. ಮಂಗನಹಳ್ಳಿಯದು ೪ ಲಕ್ಷ ರೂಪಾಯಿ ಕೆಲಸ. ನಮ್ಮ ಮಾಹಿತಿ ಪ್ರಕಾರ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರು ಅದಕ್ಕೆ ಆಬ್ಜೆಕ್ಟ್ ಮಾಡುತ್ತಿದ್ದಾರೆಂದು ಇದೆ. ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಆಬ್ಜೆಕ್ಷನ್ ಮಾಡುವುದರಲ್ಲಿ ಅರ್ಥವಿಲ್ಲವೆಂದು ಅದನ್ನೂ ಕೂಡ ಮಾಡಿಸಬೇಕೆಂದರೆ Sir, I will have this also examined as to what is the basis of the objection of the Excise Department. ಅದಕ್ಕೆ ಯಾರು ಅಡ್ಡ ಬರುತ್ತಿದ್ದಾರೆ ಅದನ್ನು ಕೂಡ ನಾನು ನೋಡಿಸಿ ಆಮೇಲೆ ಮಾಡಲಿಕ್ಕೆ ಸಾಧ್ಯವಿದ್ದರೆ ನಾನು ಮಾಡಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಮಂತ್ರಿಗಳು ಹಣ ಒದಗಿಸತಕ್ಕ ಪ್ರಯತ್ನ ಮಾಡಿದರೆ ಕೆಲಸಗಳನ್ನು ಸಂಪೂರ್ಣವಾಗಿ ಮಾಡತಕ್ಕ ಕೆಲಸವನ್ನು ನಾವು ಮಾಡುತ್ತೇವೆ ಅದಕ್ಕೆ ತೊಂದರೆ ಇಲ್ಲ. ಈಗ ತಾವೇನು ಮಾಡುತ್ತೇವೆಂದು ಉತ್ತರ ಹೇಳಿದ್ದೀರಿ ಹಿಂದೆ ಸದ್ಯೋಜಾತಪ್ಪನವರು ಇದ್ದಾಗ ಅವುಗಳಿಗೆ ಶಂಕು ಸ್ಥಾಪನೆ ಮಾಡಿದ್ದರು. ೧೯೮೫ ರಲ್ಲಿ ಆಗ ನಾನು ಶಾಸಕನಾಗಿರಲಿಲ್ಲ. ಆ ಸಂದರ್ಭದಲ್ಲಿ ಇದು ಆಗಿರತಕ್ಕದ್ದು. ನಾನು ಹೇಳತಕ್ಕದ್ದು ಏನೆಂದರೆ ಹರಿಜನ ಗಿರಿಜನರಿಗೆ ಆಗತಕ್ಕ ಸೌಲಭ್ಯಗಳನ್ನು ತಡೆಗಟ್ಟುವುದಕ್ಕೆ ಪಟ್ಟಭದ್ರ ಹಿತಾಸಕ್ತಿಗಳು ಇರುತ್ತವೆ, ಅವರ ಸಹವಾಸದಿಂದ ಈ ಪರಿಣಾಮವಾಗಿದೆ. ಆಗಲೂ ಮಂಜೂರು ಮಾಡಿದ್ದು ಕಾಂಗ್ರೆಸ್ ಸರ್ಕಾರ. ಈಗಲೂ ಕಾಂಗ್ರೆಸ್ ಸರ್ಕಾರ ಮಾಡುವುದಕ್ಕೆ ಸಾಧ್ಯವಿದೆ. ಅವರು ಕೊಟ್ಟಿರತಕ್ಕ ನೆಪಗಳಲ್ಲಿ ಹುರುಳಿಲ್ಲ. ಇದಕ್ಕೆ ಅನುದಾನವನ್ನು ಕೊಡತಕ್ಕ ಆಶ್ವಾಸನೆಯನ್ನು ಕೊಡಿ. ಕೆಲಸವನ್ನು ಸಂಪೂರ್ಣವಾಗಿ ಮಾಡಿ. ಏನೇ ಆಬ್ಜೆಕ್ಷನ್ ಇದ್ದರೂ ಕೂಡ ನಾವು ಅದಕ್ಕೆ ಅನ್ಸರ್ ಮಾಡುತ್ತೇವೆ. ಕೊನೆಯ ಪಕ್ಷ ನಿಮ್ಮನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಎರಡು ಕೆಲಸಗಳಂತೂ ಈ ವರ್ಷ ಪೂರೈಸುತ್ತೇವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಹಣದ ಪ್ರಶ್ನೆಯಲ್ಲ. ಹಣ ಜಾಸ್ತಿ ಬೇಕಾಗಿಲ್ಲ, ಇನ್ನು ಎರಡು ಕೆಲಸಕ್ಕೆ ನಾಲ್ಕೈದು ಲಕ್ಷ ಬೇಕಾಗುತ್ತದೆ. ಒಂದು ವರ್ಷಕ್ಕೆ ಅಷ್ಟು ಹಣ ಬೇಕಾಗುತ್ತದೆ. ಆ ಕಾರಣದಿಂದ ಅಲ್ಲಿ ಕೆಲಸ ನಿಂತಿಲ್ಲ. ಆಬ್ಜೆಕ್ಷನ್ ಏನಿದೆ ಅಂದರೆ ಟೆಕ್ನಿಕಲ್ ಅಥವಾ ಬೇರೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನದ ಒಂದು ಕಡೆ ಆಬ್ಜೆಕ್ಷನ್ ಇದೆ. ಒಂದು ಕಡೆ ಟೆಕ್ನಿಕಲ್ ಅಬ್ಜೆಕ್ಷನ್ ವಯಬಲ್ ಪ್ರಶ್ನೆಯಿದೆ. ಮತ್ತೆ ಕೆಳಗಡೆ ಇರತಕ್ಕವರಿಗೆ ತೊಂದರೆಯಾಗುತ್ತದೆ ಎನ್ನುವ ಮಾತು ಇದೆ. ಅದು ಸರಿಯಲ್ಲವೆಂದು ತಾವು ಹೇಳುವುದಾದರೆ ಅದನ್ನು ಪುನರಪರಿಶೀಲನೆ ಮಾಡಿಸುತ್ತೇನೆ. ಬಜೆಟ್‌ನಲ್ಲಿ ಇದಕ್ಕೆ ನಾಲ್ಕೈದು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಏನೂ ತೊಂದರೆಯಾಗುವುದಿಲ್ಲ.

ತುಮಕೂರಿನಲ್ಲಿ ಬೀಜ ಸಂಸ್ಕರಣಾ ಘಟಕ

೩೦೪ (ಅಃಖಿ) ಶ್ರೀ ಎಸ್. ಷಫಿ ಅಹಮದ್ (ತುಮಕೂರು).—ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತುಮಕೂರಿನಲ್ಲಿ ಬೀಜ ಸಂಸ್ಕರಣಾ ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಆ) ರಾಜ್ಯದಲ್ಲಿ ಎಷ್ಟು ಬೀಜ ಸಂಸ್ಕರಣಾ ಕೇಂದ್ರಗಳಿವೆ ? ಜಿಲ್ಲಾವಾರು ವಿವಿಧ ಬೆಳೆಗಳ ಬೀಜೋತ್ಪಾದನೆ ಕೈಗೊಂಡ ಪ್ರಮಾಣ, ಗುಣಮಟ್ಟ ಹಾಗೂ ಜಿಲ್ಲಾವಾರು ಬಿತ್ತನೆ ಬೀಜಗಳ ವಿತರಣಾ ಪ್ರಮಾಣದ ವಿವರ ?